


ಎಡದಿಂದ ಬಲಕ್ಕೆ:

1. ಅವಸರವನ್ನ ಕೈಬಿಡದಿದ್ದರೆ ಸಾವು ಬಂದೀತು (4)
3. ಪರದೆಯನ್ನು ಎಳೆವ ಕೆಲಸವೇ ಅತಿ ಮುಖ್ಯ (3)
4. ಗಾಡಿ ಏರುವವರನ್ನೆಲ್ಲ ಹೆದರಿಸಿತು ನೋಡಿ ಮಂಗಮುಂದಾಳು (3)
6. ಅಲಕ್ಷಿತ ಜನರ ಸಂಖ್ಯೆ ನೂರು ಸಾವಿರಗಟ್ಟಳೆ ಇದೆ (4)
7. ಅವರಣ್ಣ ಕಟ್ಟಿಸಿದ್ದು ಈ ಸುತ್ತುಗೋಡೆ (4)
8. ರಾಮನಲ್ಲ ಈತ; ಕೃಷ್ಣನ ಅಣ್ಣ (4)
10. ಗೊಲ್ಲರ ಕೈಯಲ್ಲಿ ರಸಮಯ ಸಿಹಿ ತಿಂಡಿ (4)
12. ಅವರಿವರ ಬಾಯಲ್ಲೆಲ್ಲ 'ಶತ್ರುವಿನ ಹೆದರಿಕೆ' (4)
14. ಶಿಲೆಯಲ್ಲೇ ನಿರ್ಮಿಸಿರುವ 'ಈಶ್ವರನ ಮನೆ' (4)
16. 'ಶಿವನ ಕಣ್ಣು' ಈ ಕಾಯಿ ಹೌದೇ? (3)
17. ಜೀವನ ಪೂರ್ತಿ ಆಕೆ ತರುಣಿಯೇ ಆಗಿರಬಹುದೇ? (3)
18. ವಾತಾಪಿಯನ್ನ ಅಂತ್ಯಗೊಳಿಸಿದ್ದು ಇದೇ ಋಷಿಗಳ ಕಾಡಿನಲ್ಲೇ (4)

ಮೇಲಿಂದ ಕೆಳಕ್ಕೆ:

1. ಆ ಅನಿಲ ಕಂಡೊಡನೆ ಬೆಂಕಿ ಬಿತ್ತು (3)
2. ರಂಗಿನ ಜನರೇ ತುಂಬಿರುವ ಪಟ್ಟಣ ಇದು (3)
3. ಕಾರಣವಿಲ್ಲದೇ ಪ್ರಾಣ ತೆಗೆದ ಘಟನೆ ಗೊತ್ತೇ? (4)
5. ಕೇವಲ ಹೆಸರಿಗೆ ಆತ ಲಾಯರು (3)
7. ಬರೀ ಡಂಬಾಚಾರ ತುಂಬಿದ ಪ್ರದರ್ಶನ (4)
9. ಹಿಮಾಲಯಕ್ಕೂ ಕಾಲಿಟ್ಟ ಭಾರೀ ಪ್ರಳಯ (4)
11. ಗಟಾರದ ಬಳಿ ನಿಂತ ಗೂಳಿಯ ಕೂಗು ಕೇಳಿ (3)
13. ಯಾರ ಮನೆಗೆ ನುಗ್ಗಿತೋ ಆ ಗಜಕಂದ (4)
14. ತಕ್ಷಶಿಲೆಯಲಿ ವಿದ್ಯಾವಂತನಾದವ (3)
15. ಜಯವನ್ನು ಕೋರಿ ಆಚರಿಸಿದ ಹೋಮ (3)

## ಪದಬಂಧ : 15-10-2009ರ ಉತ್ತರಗಳು

ಎಡದಿಂದ ಬಲಕ್ಕೆ: 1. ಉಪದೇಶ; 3. ವಿವಾದ; 4. ಕಡಿಮೆ; 6. ಆಪದ್ಧನ; 8. ಮಾಗುವಿಕೆ; 10. ಸುಮಧುರ; 12. ಕಲೋದ್ಯಾನ; 16. ಣರಕ; 17. ಮಲಿನ; 18. ರಮ್ಯವನ
ಮೇಲಿಂದ ಕೆಳಕ್ಕೆ: 1. ಉದರ; 2. ಶಕಟ; 3. ವಿರುದ್ಧ; 5. ಮೆರುಗು; 6. ಆಸುಪಾಸು; 7. ನಷ್ಟಕರ; 8. ಮಾನಸಿಕ; 9. ಕೆಟ್ಟಜನ; 11. ಧುರೀಣ; 13. ಲೋಚನ; 14. ಆಕರ; 15. ಶಮನ.

# ಜೀವ ಜಗತ್ತು

## 'ನಾಟಿಲಸ್'- ಏನು ವಿಶೇಷ?

ನಾಟಿಲಸ್- ಅದೊಂದು ಮೃದ್ವಂಗಿ. ಅದರ ಮೊದಲ ವಿಶೇಷ ಏನೆಂದರೆ ಲಕ್ಷಾಂತರ ಪ್ರಭೇದಗಳಿರುವ ಮೃದ್ವಂಗಿ ಸಾಮ್ರಾಜ್ಯದಲ್ಲಿ ನಾಟಿಲಸ್‌ಗಳದೇ ಗರಿಷ್ಠ ಪ್ರಾಚೀನತೆ. ಸೋಜಿಗ ತುಂಬಿದ ಅತಿ ಸುಂದರ ರೂಪದ ಬಹು ಕೊಠಡಿಗಳ ಸುರುಳಿ ಆಕಾರದ ಚಿಪ್ಪನ್ನು ನಿರ್ಮಿಸುವುದು ಈ ಮೃದ್ವಂಗಿಗಳ ಮತ್ತೊಂದು ವೈಶಿಷ್ಟ್ಯ.

ಈಗ್ಗೆ ಐವತ್ತು ಕೋಟಿ ವರ್ಷ ಹಿಂದೆ ಆಗಿನ ಕಡಲಿನಾವಾರದಲ್ಲಿ ಅವತರಿಸಿದ ಮೂಲ 'ನಾಟಿಲಾಯಿಡ್' ವರ್ಗ ಹತ್ತು ಸಾವಿರ ಪ್ರಭೇದಗಳಾಗಿ ವಿಕಾಸಗೊಂಡಿತ್ತು. ಆಗಿನಿಂದ ಹೇರಳ ತಳಮಳಗಳನ್ನೆದುರಿಸಿ, ಪ್ರಳಯಗಳನ್ನೂ ಸಹಿಸಿ ಕಡೆಗೆ ಪ್ರಸ್ತುತ ನಾಟಿಲಸ್‌ಗಳ ಹನ್ನೊಂದೇ ಪ್ರಭೇದಗಳು ಉಳಿದಿವೆ. ಅವೆಲ್ಲವೂ ಈಗಲೂ ಕಡಲವಾಸಿಗಳಾಗಿಯೆ ಉಳಿದಿವೆ- ಅದೂ ಶಾಂತ ಸಾಗರದಲ್ಲಿ ಮಾತ್ರ.

ಸುಂದರ ಸುರುಳಿ ಚಿಪ್ಪನ್ನು ನಿರ್ಮಿಸಿ ಅದರೊಳಗೇ ಸುರಕ್ಷಿತವಾಗಿ ಬದುಕುವ ಎಲ್ಲ ನಾಟಿಲಸ್‌ಗಳು ಮೊಟ್ಟೆಯಿಂದ ಹೊರಬರುವಾಗಲೇ ಏಳು ಕೋಣೆಗಳಿಂದ ಕೂಡಿದ ಚಿಪ್ಪನ್ನು ಪಡೆದಿರುತ್ತವೆ. ಕೇವಲ ಒಂದೇ ಅಂಗುಲ ಗರಿಷ್ಠ ವ್ಯಾಸದ ಆ ಚಿಪ್ಪಿನ ಅತ್ಯಂತ ಹೊರಗಿನ ಕೊಠಡಿಯಲ್ಲಿ ಈ ಪ್ರಾಣಿಯ ವಾಸ್ತವ್ಯ ಅಲ್ಲಿಂದ ಮುಂದೆ ಶರೀರ ಗಾತ್ರ ಹೆಚ್ಚಿದಂತೆಲ್ಲ ಅದಕ್ಕೆ ಹೊಂದುವಂಥ ಹೊಸದಾದ ಹಿರಿದಾದ ಕೊಠಡಿಗಳನ್ನು ನಾಟಿಲಸ್ ಅದೇ ಚಿಪ್ಪಿಗೆ ಸೇರಿಸಿ ಕಟ್ಟುತ್ತ ಹೋಗುತ್ತದೆ. ಹಾಗೆ ಒಂದು ನಾಟಿಲಸ್ ಚಿಪ್ಪಿನಲ್ಲಿ ಮುವ್ವತ್ತು ಕೋಣೆಗಳು ನಿರ್ಮಾಣಗೊಳ್ಳಬಹುದು; ಒಂದು 'ಊಟದ ತಟ್ಟೆ'ಯಷ್ಟು ವಿಸ್ತಾರ ಮಟ್ಟಬಹುದು.

ಶಾಂತಸಾಗರದ ನೈರುತ್ಯ ಸಮಭಾಜಕದ ಆಸುಪಾಸಿನ ದ್ವೀಪಗಳಂಚಿನ ಹವಳ ರಾಜ್ಯಗಳ ಸನಿಹದಲ್ಲೇ ನಾಟಿಲಸ್‌ಗಳು ನೆಲೆಸಿವೆ. ಅಂಥ ಕಡೆಗಳಲ್ಲೆಲ್ಲ ಪ್ರತಿನಿತ್ಯ ಕತ್ತಲು ಮುಸುಕಿದೊಡನೆ ಕಡಲ ನೆಲದ ಕೆಸರಿನಾವಾರದಿಂದ ಲಕ್ಷ



ಲಕ್ಷ ಸಂಖ್ಯೆಗಳಲ್ಲಿ ನಾಟಲಸ್‌ಗಳು ಹೊರಬಂದು ಹವಳ ದಿಬ್ಬಗಳಲ್ಲಿ ಆಹಾರಾನ್ವೇಷಣೆ ಕೈಗೊಳ್ಳುತ್ತವೆ. ಕೇವಲ ವಾಸನೆಯನ್ನೇ ಅನುಸರಿಸಿ ಹವಳ ದಿಬ್ಬಗಳಲ್ಲಿನ ವಿಧ ವಿಧ ಮೃತ ಜೀವಿಗಳನ್ನು, ಏಡಿಗಳನ್ನು, ಕಡಲ ನಳ್ಳಿಗಳ ಪೊರೆಗಳನ್ನು ಹುಡುಕಿ ತಿನ್ನುತ್ತವೆ. ನೀರಲ್ಲಿ ಮುಳುಗಿದ ಹವಳ ಲೋಕಕ್ಕೆ ಮುಂಜಾನೆಯ ಸೂರ್ಯರಶ್ಮಿ ತಲುಪಿದೊಡನೆ ಕಡಲ ನೆಲದ, ಕೆಸರು ತುಂಬಿದ ತಮ್ಮ ನೆಲೆಗಳಿಗೆ ವಾಪಸ್ಸಾಗುತ್ತವೆ. ನಾಟಿಲಸನ್‌ನ ಕಣ್ಣುಗಳದು ಬಹು ಪ್ರಾಚೀನ ವಿನ್ಯಾಸ. ಮಸೂರಗಳೇ ಇಲ್ಲದ ಅಕ್ಷರಗಳಿಂದಾಗಿ ನಾಟಿಲಸ್‌ಗಳದು ಅತ್ಯಂತ ಮಂದ ದೃಷ್ಟಿ; ಕತ್ತಲು ಬೆಳಕುಗಳನ್ನಷ್ಟೇ ಗುರುತಿಸಬಲ್ಲ ಸಾಮರ್ಥ್ಯ. ಆದ್ದರಿಂದಲೇ ಈ ಮೃದ್ವಂಗಿಗಳದು ವಾಸನಾಧಾರಿತ ಜೀವನ; ನಿಶಾಚರ ಬಹುಕು. ಇವು ನಾಟಿಲಸ್‌ಗಳ ವೈಶಿಷ್ಟ್ಯಗಳೇ.

■ ಎನ್. ವಾಸುದೇವ್